


ವಿದ್ಯಮಾನ

# ಹುಚ್ಚು ಯಾರಿಗೆ?

‘ಮೆಂಟಲ್ ಹೈ ಕ್ಯಾ’ ಚಿತ್ರದ ಟ್ರೈಲರ್, ಪೋಸ್ಟರ್‌ಗಳು ಹುಚ್ಚಿನ ಕುರಿತ ಅನಾರೋಗ್ಯಕರ ಮನೋಧರ್ಮದ ವಿಮರ್ಶೆಗೆ ಅವಕಾಶ ಮಾಡಿಕೊಟ್ಟಿವೆ.

■ ಪೃಥ್ವಿರಾಜ್

ಇಂದಿನ ಸ್ಪರ್ಧಾತ್ಮಕ ಪರಿಸ್ಥಿತಿಯಲ್ಲಿ ಕೆಲಸ ಮತ್ತು ಸಾಮಾಜಿಕ ಒತ್ತಡಗಳಿಂದಾಗಿ ಹಲವರು ವರ್ತನಾ ಸಮಸ್ಯೆಗಳು ಮತ್ತು ವ್ಯಕ್ತಿತ್ವ ಸಮಸ್ಯೆಗಳ ಸುಳಿಗೆ ಸಿಲುಕುತ್ತಿದ್ದಾರೆ. ಇದರಿಂದ ದೇಹಕ್ಕಷ್ಟೇ ಅಲ್ಲ, ಮಾನಸಿಕವಾಗಿಯೂ ಸಮಸ್ಯೆಗಳು ಉಂಟಾಗುತ್ತವೆ. ಇಂತಹ ಸಮಸ್ಯೆಗಳಿಂದ ಬಳಲುತ್ತಿರುವವರನ್ನು ಹುಚ್ಚರು, ಅಸ್ವಸ್ಥರು ಎನ್ನಲಾಗುತ್ತದೆ. ಹೀಗೆ ಕರೆಯುವುದು ಪ್ರಶ್ನಾರ್ಹ.

ಮಾನಸಿಕ ಅಸ್ವಸ್ಥ ಹಣೆಪಟ್ಟಿಯ ಪ್ರಶ್ನೆ ಮುನ್ನೆಲೆಗೆ ಬರಲು ಕಾರಣ, ಬಾಲಿವುಡ್‌ನ ‘ಮೆಂಟಲ್ ಹೈ ಕ್ಯಾ’ ಚಿತ್ರ. ಈಚೆಗೆ ಚಿತ್ರದ ಟ್ರೈಲರ್ ಬಿಡುಗಡೆಯಾಗಿದ್ದು, ಚಿತ್ರದ ಪೋಸ್ಟರ್‌ಗಳು, ನಟರ ಭಾವ–ಭಂಗಿಗಳು ಮತ್ತು ಶೀರ್ಷಿಕೆ ಚರ್ಚೆಗೆ ಗ್ರಾಸವಾಗಿವೆ.

ಕಂಗನಾ ರನೋಟ್, ರಾಜ್‌ಕುಮಾರ್ ರಾವ್ ಮುಖ್ಯಪಾತ್ರಗಳಲ್ಲಿ ನಟಿಸಿರುವ ಈ ಚಿತ್ರದ ಶೀರ್ಷಿಕೆ ಬಗ್ಗೆಯೇ ಅಪಸ್ವರ ಎದ್ದಿದೆ. ‘ಸಿನಿಮಾದ ಶೀರ್ಷಿಕೆ ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿರುವವರನ್ನು ಅವಹೇಳನ ಮಾಡುವಂತಿದೆ’ ಎಂದು ‘ಭಾರತೀಯ ಮನೋವಿಜ್ಞಾನ ಸಮಾಜ’ ಮತ್ತು ‘ಭಾರತೀಯ ವೈದ್ಯಕೀಯ ಪರಿಷತ್’ ಆಕ್ರೋಶ ವ್ಯಕ್ತಪಡಿಸಿವೆ. ಚಿತ್ರದಲ್ಲಿನ ದೃಶ್ಯಗಳು ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿರುವವರ ಹಕ್ಕುಗಳನ್ನು ಉಲ್ಲಂಘಿಸುವಂತಿದ್ದರೆ, ಅವರ ಭಾವನೆಗಳಿಗೆ ಧಕ್ಕೆ ತರುವಂತಿದ್ದರೆ, ಅಂತಹ ದೃಶ್ಯಗಳಿಗೆ ಕತ್ತರಿ ಹಾಕುವಂತೆ ಸೆನ್ಸಾರ್ ಮಂಡಳಿಯನ್ನು ಒತ್ತಾಯಿಸಿವೆ. ಸಾಧ್ಯವಾದರೆ ಚಿತ್ರತಂಡದ ಮನವೊಲಿಸಿ ಶೀರ್ಷಿಕೆ ಬದಲಿಸಲು ಮನಸು ಮಾಡುವಂತೆ ಮನವಿ ಮಾಡಿವೆ. ಸುಮಾರು ನಾಲ್ಕು ಲಕ್ಷ ಸದಸ್ಯರನ್ನು ಹೊಂದಿರುವ ಈ ಎರಡೂ ಸಂಸ್ಥೆಗಳು, ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿರುವವರನ್ನು ಸಮಾಜ ನೋಡುತ್ತಿರುವ ದೃಷ್ಟಿಕೋನದ ಮೇಲೆ ಸಿನಿಮಾ ಪರಿಣಾಮ ಬೀರುತ್ತದೆ ಎಂದು ಆತಂಕ ವ್ಯಕ್ತಪಡಿಸಿವೆ.


Smriti Joshi
Follow
Here's why we need to #Bridgethegap in all aspects with regards to #Mentalhealth scenario in India. upcoming movie #mentalhaikya -the name, the images super triggering and loaded with stigma @netshrink @AnantBhan @chibberratna @VijayNallawala @mentalhealthind @healthcollectif .

‘ಈ ಚಿತ್ರವನ್ನು ಮನರಂಜನೆಯ ಉದ್ದೇಶದಿಂದ ನಿರ್ಮಿಸಿದ್ದೇವೆ. ಯಾರನ್ನೂ ನೋಯಿಸುವ ಉದ್ದೇಶವಿಲ್ಲ’ ಎಂದು ವಿವಾದದ ಬಗ್ಗೆ ಚಿತ್ರತಂಡ ಪ್ರತಿಕ್ರಿಯಿಸಿದೆ. ಚಿತ್ರತಂಡದ ಹೇಳಿಕೆಗೆ ಖಾರವಾಗಿ ಪ್ರತಿಕ್ರಿಯಿಸಿರುವ ಭಾರತೀಯ ಮನೋವಿಜ್ಞಾನ ಸಮಾಜ ‘ಚಿತ್ರದ ಶೀರ್ಷಿಕೆಯಲ್ಲೇ ಮನರಂಜನೆ ಲಕ್ಷಣಗಳು ಕಾಣುತ್ತಿಲ್ಲ’ ಎಂದು ಟೀಕಿಸಿದೆ.

ಚಿತ್ರದ ಪೋಸ್ಟರ್‌ಗಳ ಬಗ್ಗೆ ಟ್ವಿಟರ್‌ನಲ್ಲೂ ಚರ್ಚೆಯಾಗುತ್ತಿದೆ. ಕಾರಣ ಚಿತ್ರ ತಂಡ ಬಿಡುಗಡೆ ಮಾಡಿರುವ ಎಲ್ಲ ಪೋಸ್ಟರ್‌ಗಳಲ್ಲೂ ಮಾನಸಿಕ ಸಮಸ್ಯೆಗಳಿಂದ ಬಳಲುವವರು ಅಪಾಯಕಾರಿ ಎಂಬಂತೆಯೇ ಬಿಂಬಿಸಲಾಗಿದೆ. ಪೋಸ್ಟರ್ ಒಂದರಲ್ಲಿ, ಸೇಬು ಕತ್ತರಿಸಲು ನಟ ರಾಜ್‌ಕುಮಾರ್ ರಾವ್ ದೊಡ್ಡ ಕತ್ತಿಯನ್ನು ಹಿಡಿದುಕೊಂಡಿದ್ದು, ಗಾಯವಾಗಿ ರಕ್ತ ಸೋರುತ್ತಿರುವಂತೆ ತೋರಿಸಲಾಗಿದೆ. ಮತ್ತೊಂದರಲ್ಲಿ ಅರೆನಗ್ನವಾಗಿ ಕುಳಿತಿರುವ ಕಂಗನಾ ರನೋಟ್ ಅವರು ಸುಟ್ಟು ಕರಕಲಾಗುತ್ತಿರುವ ಬ್ರೆಡ್ ತುಂಡುಗಳನ್ನು ಗಮನಿಸದೇ, ಕೈಯಲ್ಲಿ ಕತ್ತಿಹಿಡಿದು ಅದನ್ನೇ ತದೇಕಚಿತ್ತದಿಂದ ನೋಡುತ್ತಿದ್ದಾರೆ. ಇನ್ನೆರಡು ಪೋಸ್ಟರ್‌ಗಳಲ್ಲಿ ರಾಜ್‌ಕುಮಾರ್ ಅವರು ಸಿಗರೇಟ್‌ನಿಂದ ಹಣೆಯನ್ನು ಸುಟ್ಟುಕೊಳ್ಳುತ್ತಿದ್ದರೆ, ಅರೆನಗ್ನವಾಗಿ ಕುಳಿತಿರುವ ಕಂಗನಾ ಲೈಟರ್‌ನಿಂದ ನಾಲಗೆ ಸುಟ್ಟುಕೊಳ್ಳುತ್ತಿದ್ದಾರೆ. ‘ಪ್ರೇಕ್ಷಕರ ಗಮನ ಸೆಳೆಯುವುದಕ್ಕಾಗಿ ಇಂತಹ ಪೋಸ್ಟರ್‌ಗಳನ್ನು ಬಿಡುಗಡೆ ಮಾಡಿದ್ದರೆ, ಮಾನಸಿಕ ಸಮಸ್ಯೆಗಳಿಂದ ಬಳಲುವವರ ಜೀವನ ಹೀಗೆಯೇ ಇರುತ್ತದೆ ಎಂಬ ಸಂದೇಶ ರವಾನಿಸಿದಂತೆ ಆಗುವುದಿಲ್ಲವೆ ಎಂದು ಚಿತ್ರತಂಡ ಯೋಚಿಸಬೇಕಿತ್ತು’ ಎಂದು ಮಾನಸಿಕ ಅಸ್ವಸ್ಥರ ಬಗ್ಗೆ ಕಾಳಜಿ ಹೊಂದಿರುವವರು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

ಚಿತ್ರದ ಪೋಸ್ಟರ್ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿರುವ ಮನೋವೈದ್ಯೆ ಸ್ಮೃತಿ ಜೋಷಿಯವರು ‘ಮಾನಸಿಕ ಆರೋಗ್ಯದ ಬಗ್ಗೆ ಭಾರತೀಯರಲ್ಲಿರುವ ಆಲೋಚನೆಗಳನ್ನು ಬದಲಿಸುವ ಅನಿವಾರ್ಯತೆ ಇದೆ. ಚಿತ್ರದ ಶೀರ್ಷಿಕೆ ಮತ್ತು ಪೋಸ್ಟರ್‌ಗಳು ಪ್ರಚೋದನಕಾರಿ ಮತ್ತು ಅವರನ್ನು ಅವಹೇಳನ ಮಾಡುವಂತಿವೆ’ ಎಂದು ಟ್ವೀಟ್ ಮಾಡಿದ್ದಾರೆ. ‘ಮನೋವೈದ್ಯರಿಗೆ ಮಾನಸಿಕ ಸಮಸ್ಯೆಗಳಿಂದ ಬಳಲುವ ವಯಸ್ಕರಿಗೆ ಚಿಕಿತ್ಸೆ ನೀಡುವುದೇ ಸವಾಲಿನ ವಿಷಯ. ಮಾನಸಿಕ ಅಸ್ವಸ್ಥರು ತಮ್ಮನ್ನು ತಾವೇ ಹಿಂಸಿಸಿಕೊಳ್ಳುತ್ತಾರೆ, ಅಪಾಯಕಾರಿಯಾಗಿರುತ್ತಾರೆ ಎಂದು ಬಿಂಬಿಸುವುದು ಸರಿಯೇ’ ಎನ್ನುವುದು ಅವರ ಪ್ರಶ್ನೆ.

‘ದೇಶದ ಜನಸಂಖ್ಯೆಯ ಶೇ. 25ರಷ್ಟು ಮಂದಿ ಯಾವುದಾದರೂ ಒಂದು ಮಾನಸಿಕ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಅದಕ್ಕೆ ಹಲವು ಕಾರಣಗಳಿರಬಹುದು. ಇದರ ಬಗ್ಗೆ ಚಿಂತಿಸಬೇಕಿದೆ. ಅಲ್ಲದೇ ಯಾವುದೇ ವ್ಯಕ್ತಿಯನ್ನು ‘ಮೆಂಟಲ್’ ಎಂದು ಕರೆಯುವುದಕ್ಕೆ ಕಾನೂನಿನಲ್ಲೂ ಅವಕಾಶವಿಲ್ಲ’ ಎಂದು ಡಾ. ವೈಷ್ಣವ್ ಎನ್ನುವವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಾನಸಿಕ ಸಮಸ್ಯೆಗಳಿಂದ ಬಳಲುವವರನ್ನು ಚಲನಚಿತ್ರಗಳಲ್ಲಿ ಸಾಧ್ಯವಾದಷ್ಟು ಕೆಟ್ಟದಾಗಿ ಚಿತ್ರಿಸುವವರು, ಆ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸಲು ಯಾಕೆ ತೋರುತ್ತಿಲ್ಲ ಎಂಬುದು ಕೇಳಿಕೊಳ್ಳಬೇಕಾದ ಪ್ರಶ್ನೆ. ಅನಾರೋಗ್ಯಪೀಡಿತ ದೇಹಕ್ಕೆ ಆರೈಕೆ ಬೇಕು, ಅದೇ ರೀತಿ ಮಾನಸಿಕ ಸಮಸ್ಯೆಗಳಿಂದ ಬಳಲುತ್ತಿರುವವರನ್ನು ಅಕ್ಕರೆಯಿಂದ ಕಾಣಬೇಕು ಎನ್ನುವ ಸಂಗತಿಯನ್ನು ಎಲ್ಲರೂ ನೆನಪಿಡಬೇಕು. ■